# ಗದ್ದುಗೆಗೆ ಗುದ್ದಾಟ



## 01

ಬಿಜೆಪಿ ಅಭ್ಯರ್ಥಿ ಸಿ.ಎಸ್.ನಿರಂಜನ್ ಕುಮಾರ್ 94,151 ಮತಗಳನ್ನು ಪಡೆದಿದ್ದು, ಗುಂಡ್ಲುಪೇಟೆ ಕ್ಷೇತ್ರದ ಹಾಲಿ ಸಚಿವೆ ಗೀತಾ ಮಹದೇವಪ್ರಸಾದ್‌ರನ್ನು ಸೋಲಿಸಿದ್ದಾರೆ. ಆ ಮೂಲಕ **ಪ್ರಥಮ** ಬಾರಿಗೆ ಮಹದೇವಪ್ರಸಾದ್ ಕುಟುಂಬ ಗುಂಡ್ಲುಪೇಟೆ ಕ್ಷೇತ್ರದಲ್ಲಿ ಸೋಲನ್ನು ಅನುಭವಿಸಿದೆ.



## ಡಿ.ಕೆ. ಶಿವಕುಮಾರ್

ಇಂಧನ ಸಚಿವ ಡಿ.ಕೆ.ಶಿವಕುಮಾರ್ 6ನೇ ಬಾರಿ ಆಯ್ಕೆ ಬಯಸಿ ಕನಕಪುರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಜೆಡಿಎಸ್‌ನ ನಾರಾಯಣಗೌಡ ವಿರುದ್ಧ ಕಣಕ್ಕಿಳಿದಿದ್ದರು. ಡಿ.ಕೆ.ಶಿವಕುಮಾರ್ 1,27,552 ಮತಗಳನ್ನು ಪಡೆದರೆ ನಾರಾಯಣಗೌಡ 47,643 ಮತಗಳನ್ನು ಪಡೆದು, 79,909 ಮತಗಳ ಅಂತರದಿಂದ ಜಯಭೇರಿ ಬಾರಿಸುವ ಮೂಲಕ ದಾಖಲೆ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

## ಜಿಲ್ಲೆ ವಿಶ್ಲೇಷಣೆ

## ಟ್ವೀಟು ಬಾರ



**ಬ್ಲೂಲೆಮನ್**
@Indopolity

ಕಾಂಗ್ರೆಸ್ ಜತೆಗಿನ ಮೈತ್ರಿಗೆ ಜೆಡಿಎಸ್‌ನ ಅನೇಕ ಶಾಸಕರಿಗೆ ಮನಸ್ಸಿಲ್ಲ. ಅವರ ಮುಂದಿರುವ ಹಾದಿ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವುದು. ಆಗ ವಿಧಾನಸಭೆ ಸಾಮರ್ಥ್ಯ ಕಡಿಮೆಯಾಗಿ ಬಿಜೆಪಿ ಅಧಿಕಾರಕ್ಕೆ ಬರುವಂತೆ ಮಾಡುವುದು. ಆದರೆ ಇದು ಎಷ್ಟರ ಮಟ್ಟಿಗೆ ಸಾಧ್ಯ?



**ಬ್ರೋಕನ್ ಪಂಡಿತ್**
@Brokenpundit

ಕರ್ನಾಟಕದ ಚುನಾವಣೆಯ ಫಲಿತಾಂಶದ ಒಟ್ಟಾರೆ ಸಾರಾಂಶ ಏನೆಂದರೆ, ಶೇ.35ರಷ್ಟು ಅಂಕ ಪಡೆದವನು ಸಂತೋಷವಾಗಿರುತ್ತಾನೆ. ಅತಿ ಹೆಚ್ಚು ಅಂಕ ಪಡೆದವರು ಕೊರಗುತ್ತಲೇ ಇರುತ್ತಾನೆ.



**ಸಿದ್**
@sidmtweets

ಕಾಂಗ್ರೆಸ್–ಜೆಡಿಎಸ್ ಮೈತ್ರಿಗೆ 118 ಶಾಸಕರ ಬಲವಿದೆ. ಬಿಜೆಪಿಗೆ 104 ಶಾಸಕರ ಸಂಖ್ಯೆ ಇದೆ. ಆದರೆ ಮ್ಯಾಜಿಕ್ ಸಂಖ್ಯೆ 112. ಈ ಸಂದರ್ಭದಲ್ಲಿ ಬಿಜೆಪಿ ಮುಂದೆ ಇರುವುದು ಒಂದೇ ದಾರಿ. ಇತರೆ ಪಕ್ಷಗಳ ಶಾಸಕರಿಗೆ ಲಂಚ ನೀಡಿ ಸೆಳೆಯುವುದು ಅಥವಾ ಬೆದರಿಕೆ ಹಾಕುವುದು. ಇದು ಪ್ರಜಾಪ್ರಭುತ್ವವೇ?

## ಹಾಸನ



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 00 | 01 | 06 |

### ಜೆಡಿಎಸ್ ಭದ್ರಕೋಟೆ 'ಸುಭದ್ರ'

**ಹಾಸನ:** ಜಿಲ್ಲಾ ಚುನಾವಣೆಯ ವಿಚಾರದಲ್ಲಿ ಘಟಾನುಘಟಿಗಳ ಲೆಕ್ಕವನ್ನು ಬುಡಮೇಲು ಮಾಡುವ ರೀತಿಯಲ್ಲಿ ಫಲಿತಾಂಶ ಹೊರಬಿದ್ದಿದೆ. ಜೆಡಿಎಸ್ ಭದ್ರಕೋಟೆಯಲ್ಲಿ ಮತ್ತೊಮ್ಮೆ ಖಾತೆ ತೆರೆದ ಬಿಜೆಪಿ, ಹಾಸನ ಕ್ಷೇತ್ರದಲ್ಲಷ್ಟೇ ಬಿಜೆಪಿ ಖಾತೆ ತೆರೆಯಲು ಶಕ್ತವಾಯಿತು. ಹಾಸನದಲ್ಲಿ ಬಿಜೆಪಿ ಅಭ್ಯರ್ಥಿ ಪ್ರೀತಂ ಜೆ.ಗೌಡ 63,348 ಮತಗಳಿಂದ ಗೆಲುವು ಸಾಧಿಸಿ, ಕಳೆದ ಎರಡು ದಶಕಗಳಿಂದ ಹಾರಾಡುತ್ತಿದ್ದ ಜೆಡಿಎಸ್ ಪತಾಕೆಯನ್ನು ಕೆಳಗಿಳಿಸಿತು. ಅರಕಲಗೂಡಿನಲ್ಲಿ ಸಚಿವ ಎ.ಮಂಜು ಅವರು ಜೆಡಿಎಸ್‌ನ ಎ.ಟಿ ರಾಮಸ್ವಾಮಿ ವಿರುದ್ಧ ಹತ್ತು ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಸೋಲನ್ನೊಪ್ಪಿಕೊಂಡು ತೀವ್ರ ಮುಖಭಂಗ ಅನುಭವಿಸಿದರು. ಉಳಿದ ಆರು ಕ್ಷೇತ್ರಗಳಲ್ಲಿ ಜೆಡಿಎಸ್ ಮತ್ತೆ ಗೆಲುವು ಸಾಧಿಸುವ ಮೂಲಕ ಜೆಡಿಎಸ್ ತನ್ನ ಪಾರುಪತ್ಯ ಮುಂದುವರಿಸಿದೆ. ಆದರೆ ಈ ಬಾರಿಯ ಚುನಾವಣೆಯಲ್ಲಿ ಸಕಲೇಶಪುರದ ಜೆಡಿಎಸ್ ಅಭ್ಯರ್ಥಿ ಎಚ್.ಕೆ. ಕುಮಾರಸ್ವಾಮಿ,62,262 ಮತಗಳಿಂದ ಗೆದ್ದರೆ, ಅರಕಲಗೂಡಿನಲ್ಲಿ ಜೆಡಿಎಸ್‌ನ ಎ.ಟಿ.ರಾಮಸ್ವಾಮಿ, 85,064 ಮತಗಳಿಂದ ಗೆದ್ದಿದ್ದಾರೆ. ಅರಸೀಕೆರೆಯಲ್ಲಿ ಜೆಡಿಎಸ್‌ನ ಕೆ.ಎಂ. ಶಿವಲಿಂಗೇಗೌಡ 93,986, ಬೇಲೂರಿನಲ್ಲಿ ಜೆಡಿಎಸ್ ಅಭ್ಯರ್ಥಿ ಲಿಂಗೇಶ್ 64,268 ಮತಗಳಿಂದ ಗೆಲುವಿನ ನಗೆ ಬೀರಿದ್ದಾರೆ. ಜಿಲ್ಲೆಯಲ್ಲಿ ಪ್ರಬಲ ಸ್ಪರ್ಧೆ ಏರ್ಪಟ್ಟಿದ್ದು, ಬಿಜೆಪಿಯ ಬೇರುಗಳು ದೃಢವಾಗುತ್ತಿದೆ ಎನ್ನುವ ವಿಚಾರವಂತೂ ಸ್ಪಷ್ಟವಾಯಿತು. ಈ ತನಕ ಹಾಸನ ಜೆಡಿಎಸ್‌ನ ಭದ್ರಕೋಟೆಯೆಂದೇ ಬಿಂಬಿತವಾಗಿತ್ತು. ಆದರೆ ಈ ಸಲ ಬಿಜೆಪಿ ತನ್ನ ಖಾತೆ ತೆರೆದಿದೆ. ಈ ಮೂಲಕ ರಾಜ್ಯದ ಎಲ್ಲೆಡೆ ಕಮಲವರಳಿಸುವಲ್ಲಿ ಯಶಸ್ವಿಯಾಗಿದೆ.

## ಕೊಡಗು



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 00 | 02 | 00 |

### ಅಪ್ಪಚ್ಚು ರಂಜನ್ ಗೆಲುವು

**ಮಡಿಕೇರಿ:** ಕೊಡಗಿನಲ್ಲಿ ಎರಡೂ ಸ್ಥಾನಗಳಲ್ಲಿ ಭರ್ಜರಿ ಗೆಲುವು ಸಾಧಿಸುವ ಮೂಲಕ ಬಿಜೆಪಿಯ ಭದ್ರಕೋಟೆ ಎಂಬುದನ್ನು ಕಮಲ ಪಡೆ ಸಾಬೀತು ಪಡಿಸಿದೆ. ಮಡಿಕೇರಿ ಕ್ಷೇತ್ರದಲ್ಲಿ ಎಂ.ಪಿ.ಅಪ್ಪಚ್ಚು ರಂಜನ್ 16,015 ಮತಗಳ ಭಾರೀ ಅಂತರದಿಂದ ಗೆಲುವು ಸಾಧಿಸಿದ್ದರೆ, ವಿರಾಜಪೇಟೆ ಕ್ಷೇತ್ರದಿಂದ ಕೆ.ಜಿ.ಬೋಪಯ್ಯ 13,353 ಮತಗಳ ಅಂತರದಿಂದ ಜಯ ಸಾಧಿಸಿದ್ದಾರೆ. ತೀವ್ರ ಕುತೂಹಲ ಕೆರಳಿಸಿದ್ದ ಮತ ಎಣಿಕೆಯಲ್ಲಿ ಅಭ್ಯರ್ಥಿ ಎಂ.ಪಿ.ಅಪ್ಪಚ್ಚು ರಂಜನ್ ಪ್ರಾರಂಭಿಕ ಹಂತಗಳಲ್ಲಿ ಜೆಡಿಎಸ್‌ನ ಬಿ.ಎ.ಜೀವಿಜಯ ಅವರಿಂದ ತೀವ್ರ ಸ್ಪರ್ಧೆ ಎದುರಿಸಿದರು. 12 ಸುತ್ತುಗಳಲ್ಲಿಯೂ ಜೆಡಿಎಸ್ ಮುನ್ನಡೆ ಸಾಧಿಸಿತ್ತು. ಮತಗಳ ಅಂತರ ಸರಿಸಮಾರು 4 ಸಾವಿರದಷ್ಟಿತ್ತು. ಆದರೆ, 12ನೇ ಸುತ್ತಿನಿಂದ ಮುನ್ನಡೆ ಪಡೆದುಕೊಂಡ ಬಿಜೆಪಿ ಮಡಿಕೇರಿ ತಾಲೂಕಿನ ಮತಎಣಿಕೆ ಪ್ರಾರಂಭವಾಗುತ್ತಿರುವಂತೆಯೇ ಭಾರೀ ಅಂತರದಿಂದ ಗೆಲುವಿನತ್ತ ನಾಗಲೋಟ ಮುಂದುವರಿಸಿತು. ಅಂತಿಮವಾಗಿ ರಂಜನ್ ಪಾಲಿಗೆ 70,631 ಮತ ಲಭಿಸಿದದ್ದು, ಪ್ರತಿಸ್ಪಧಿ ಜೆಡಿಎಸ್ ಬಿ.ಎ.ಜೀವಿಜಯಗೆ 54,616 ಮತಗಳು ಲಭಿಸಿದವು. ಕಾಂಗ್ರೆಸ್ ಅಭ್ಯರ್ಥಿ ಕೆ.ಪಿ.ಚಂದ್ರಕಲಾ 38,219 ಮತ ಪಡೆದು ಮೂರನೇ ಸ್ಥಾನಕ್ಕೆ ತೃಪ್ತಿ ಪಟ್ಟುಕೊಂಡರು. ವಿರಾಜಪೇಟೆ ಕ್ಷೇತ್ರದಲ್ಲಿ 20 ಸುತ್ತುಗಳ ಮತಎಣಿಕೆ ಸಂದರ್ಭ ಪ್ರಾರಂಭಿಕ ಹಂತದಿಂದಲೇ ಬಿಜೆಪಿಯ ಕೆ.ಜಿ.ಬೋಪಯ್ಯ ಮುನ್ನಡೆ ಕಾಯ್ದುಕೊಂಡರು. ಪ್ರತೀ ಸುತ್ತಿನಲ್ಲಿಯೂ ಗೆಲುವಿನ ಅಂತರ ಹೆಚ್ಚಿಸಿಕೊಳ್ಳುತ್ತಲೇ ಇದ್ದ ಬೋಪಯ್ಯ ಅಂತಿಮವಾಗಿ 13,353 ಮತಗಳ ಅಂತರದಿಂದ ಜಯಸಾಧಿಸಿದರು. ಬೋಪಯ್ಯಗೆ 77,944 ಮತಗಳು ದೊರಕಿದರೆ, ಸಾಕಷ್ಟು ನಿರೀಕ್ಷೆ ಹೊಂದಿದ್ದ ಕಾಂಗ್ರೆಸ್‌ನ ಸಿ.ಎಸ್.ಅರುಣ್ ಮಾಚಯ್ಯ 64,591 ಮತಗಳು ಲಭಿಸಿದವು. ಇಲ್ಲಿ ಜೆಡಿಎಸ್ ಅಭ್ಯರ್ಥಿ ಸಂಕೇತ್ ಪೂವಯ್ಯ 11,224 ಮತ ಗಳಿಸಿದರು.

## ರಾಮನಗರ



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 01 | 00 | 03 |

### ರೇಷ್ಮೆನಾಡಲ್ಲಿ ಜೆಡಿಎಸ್ ಮೇಲುಗೈ

**ರಾಮನಗರ:** ಎಚ್.ಡಿ.ಕುಮಾರಸ್ವಾಮಿ ಕರ್ಮಭೂಮಿಯಾದ ರಾಮನಗರದಲ್ಲಿ ಜೆಡಿಎಸ್ ಮೇಲುಗೈ ಸಾಧಿಸಿದ್ದು, 4 ಕ್ಷೇತ್ರಗಳ ಪೈಕಿ 3ರಲ್ಲಿ ಜೆಡಿಎಸ್, 1ರಲ್ಲಿ ಕಾಂಗ್ರೆಸ್ ಗೆದ್ದಿದೆ. ಕನಕಪುರದಲ್ಲಿ ಡಿ.ಕೆ.ಶಿವಕುಮಾರ್ ದೊಡ್ಡ ಅಂತರದ ಗೆಲುವು ದಾಖಲಿಸಿದರೆ, ಮಾಗಡಿ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದ್ದ ಎಚ್.ಸಿ.ಬಾಲಕೃಷ್ಣ ಅವರು ಜೆಡಿಎಸ್‌ನ ಮಂಜುನಾಥ್ ಎದುರು ಭಾರಿ ಅಂತರದ ಸೋಲುಂಡಿದ್ದಾರೆ.ರಾಮನಗರದಲ್ಲಿ ಎಚ್.ಡಿ.ಕುಮಾರಸ್ವಾಮಿ 92,626 ಮತಗಳನ್ನು ಪಡೆದರೆ, ಕಾಂಗ್ರೆಸ್‌ನ ಇಕ್ಬಾಲ್ ಹುಸೇನ್ 69,990 ಮತಗಳನ್ನು ಗಳಿಸಿದರು. ಚನ್ನಪಟ್ಟಣ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಶಾಸಕ ಸಿ.ಪಿ.ಯೋಗೇಶ್ವರ್ ಅವರಿಗೆ ಗೆಲುವು ಕೈ ಹಿಡಿದಿಲ್ಲ. ಎಚ್.ಡಿ.ಕುಮಾರಸ್ವಾಮಿ ಎದುರು 21,530 ಮತಗಳಿಂದ ಪರಾಭವಗೊಂಡರು. ಎಚ್.ಡಿ.ಕುಮಾರಸ್ವಾಮಿ 87,995 ಹಾಗೂ ಸಿ.ಪಿ.ಯೋಗೇಶ್ವರ್ 66,465, ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಎಚ್.ಎಂ. ರೇವಣ್ಣ 30,208 ಮತಗಳನ್ನು ಪಡೆದರು. ಮಾಗಡಿ ಕ್ಷೇತ್ರದಲ್ಲಿ ಜೆಡಿಎಸ್‌ನ ಎ.ಮಂಜುನಾಥ್ 1,19,490 ಹಾಗೂ ಕಾಂಗ್ರೆಸ್‌ನ ಎಚ್.ಸಿ.ಬಾಲಕೃಷ್ಣ ಮತಗಳನ್ನು ಪಡೆದಿದ್ದಾರೆ. ಕನಕಪುರ ಕ್ಷೇತ್ರದಲ್ಲಿ ಇಂಧನ ಸಚಿವ ಡಿ.ಕೆ. ಶಿವಕುಮಾರ್ ಜೆಡಿಎಸ್‌ನ ನಾರಾಯಣಗೌಡ ಎದುರು 79,909 ಮತಗಳ ಅಂತರದ ದಾಖಲೆ ಗೆಲುವು ಕಂಡಿದ್ದಾರೆ. ಇದರೊಂದಿಗೆ ಅವರು ಸತತ ಏಳನೇ ಬಾರಿ ವಿಧಾನಸಭೆ ಪ್ರವೇಶಿಸಿದ್ದಾರೆ. ಶಿವಕುಮಾರ್ 1,27,552 ಹಾಗೂ ನಾರಾಯಣಗೌಡ 47,643 ಮತಗಳಿಸಿದ್ದಾರೆ.

## ಮಂಡ್ಯ



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 00 | 00 | 07 |

### ಸಕ್ಕರೆನಾಡು ಜೆಡಿಎಸ್ ಪಾಲು

**ಮಂಡ್ಯ:** ಸಕ್ಕರೆನಾಡು ಮಂಡ್ಯ ಜಿಲ್ಲೆಯ ಏಳೂ ಸ್ಥಾನಗಳು ಜೆಡಿಎಸ್ ಪಾಲಾಗಿವೆ. ಮಂಡ್ಯ ಕ್ಷೇತ್ರದಲ್ಲಿ ಜೆಡಿಎಸ್‌ನ ಎಂ.ಶ್ರೀನಿವಾಸ್ 69,421 ಮತಗಳನ್ನು ಪಡೆದು, ನಿಕಟ ಸ್ಪರ್ಧಿ ಕಾಂಗ್ರೆಸ್‌ನ ಪಿ. ರವಿಕುಮಾರಗೌಡ ಗಣಿಗ ಅವರನ್ನು 21,608 ಮತಗಳಿಂದ ಪರಾಭವಗೊಳಿಸಿದ್ದಾರೆ.ಬಿಜೆಪಿಯಿಂದ ಸ್ಪರ್ಧಿಸಿದ್ದ ಜಿಪಂ ಸದಸ್ಯ ಎನ್. ಶಿವಣ್ಣ 32,064 ಮತಗಳನ್ನು ಪಡೆದರು. ಜೆಡಿಎಸ್ ಶಾಸಕ ಕೆ.ಸಿ.ನಾರಾಯಣಗೌಡ 17,219 ಮತಗಳ ಅಂತರದಿಂದ ಗೆಲುವಿನ ದಡ ಸೇರಿದ್ದಾರೆ, ಕ್ಷೇತ್ರದಲ್ಲಿ ಜೆಡಿಎಸ್‌ಗೆ 88,016 ಮತ್ತು ಕಾಂಗ್ರೆಸ್‌ನ ಕೆ.ಬಿ.ಚಂದ್ರಶೇಖರ್ ಅವರಿಗೆ 70,897 ಮತಗಳು ಲಭಿಸಿವೆ.ಬಿಜೆಪಿಯ ಬಿ.ಸಿ.ಮಂಜು 9,819 ಮತಗಳನ್ನಷ್ಟೇ ಪಡೆದಿದ್ದಾರೆ. ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ 48,207 ಮತಗಳ ಅಂತರದಿಂದ ಸೋಲುಂಡಿದ್ದಾರೆ. ಕ್ಷೇತ್ರದಲ್ಲಿ ಜೆಡಿಎಸ್‌ನ ಕೆ.ಸುರೇಶಗೌಡ 1,12,936 ಹಾಗೂ ಎನ್.ಚಲುವರಾಯಸ್ವಾಮಿ 64,729 ಮತಗಳನ್ನು ಪಡೆದಿದ್ದಾರೆ. ಜೆಡಿಎಸ್‌ನ ಮಾಜಿ ಶಾಸಕ ಡಾ.ಕೆ.ಅನ್ನದಾನಿ 1,03,038 ಹಾಗೂ ಪಿ.ಎಂ.ನರೇಂದ್ರಸ್ವಾಮಿ 76,278 ಮತಗಳನ್ನು ಪಡೆದಿದ್ದಾರೆ. ಬಿಜೆಪಿಯಿಂದ ಸ್ಪರ್ಧಿಸಿದ್ದ ಮಾಜಿ ಸಚಿವ ಬಿ.ಸೋಮಶೇಖರ್ 10,808 ಮತಗಳನ್ನಷ್ಟೇ ಪಡೆದಿದ್ದಾರೆ. ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ರವೀಂದ್ರ ಶ್ರೀಕಂಠಯ್ಯ 1,01,307 ಮತಗಳನ್ನು ಪಡೆದಿದ್ದರೆ, ಕಾಂಗ್ರೆಸ್ ಹುರಿಯಾಳು ಎ.ಬಿ.ರಮೇಶ್ ಬಂಡಿಸಿದ್ದೇಗೌಡ 57,619 ಮತಗಳನ್ನಷ್ಟೇ ಪಡೆದಿದ್ದಾರೆ.

## ಮೈಸೂರು



| ಕಾಂಗ್ರೆಸ್ | ಬಿಜೆಪಿ | ಜೆಡಿಎಸ್ |
|---|---|---|
| 03 | 03 | 05 |

### 5ರಲ್ಲಿ ಪ್ರಾಬಲ್ಯ ಮೆರೆದ ಜೆಡಿಎಸ್

**ಮೈಸೂರು:** ಜಿಲ್ಲೆಯಲ್ಲಿ ನಡೆದ ಜಿದ್ದಾಜಿದ್ದಿಯ ರಾಜಕಾರಣದಲ್ಲಿ ತೀವ್ರ ಪೈಪೋಟಿ ನೀಡಿದ್ದ ಜೆಡಿಎಸ್ 11 ಕ್ಷೇತ್ರಗಳಲ್ಲಿ 5 ಸ್ಥಾನ ಗೆದ್ದಿದೆ. ಕಾಂಗ್ರೆಸ್ ಹಾಗೂ ಬಿಜೆಪಿ ತಲಾ ಮೂರು ಸ್ಥಾನ ಗೆದ್ದಿದೆ. ಕಳೆದ ಬಾರಿ ಕಾಂಗ್ರೆಸ್ 8ರಲ್ಲಿ ಗೆದ್ದರೆ, ಜೆಡಿಎಸ್ ಮೂರಲ್ಲಿ ಜಯಿಸಿತ್ತು. ಆದರೆ, ಸಿದ್ದರಾಮಯ್ಯ ಅವರ ಪ್ರಭಾವ ಜೆಡಿಎಸ್–ಬಿಜೆಪಿ ತಂತ್ರದ ಎದುರು ಮಣ್ಣುಮುಕ್ಕಿದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜೆಡಿಎಸ್‌ನ ಜಿ.ಟಿ.ದೇವೇಗೌಡ ಗೆಲುವು ಸಾಧಿಸಿದರೆ, ಕಾಂಗ್ರೆಸ್‌ನ ಸಿದ್ದರಾಮಯ್ಯ ಸೋಲು ಅನುಭವಿಸಿದ್ದಾರೆ. ವರುಣಾದಲ್ಲಿ ಕಾಂಗ್ರೆಸ್‌ನ ಡಾ.ಯತೀಂದ್ರ ಸಿದ್ದರಾಮಯ್ಯ 96,435ಮತಗಳಿಂದ ಗೆಲುವು ಸಾಧಿಸಿದರೆ, ಬಿಜೆಪಿಯ ತೋಟದಪ್ಪ 37,819 ಮತ ಪಡೆದಿದ್ದು, ಇಲ್ಲಿ ಬಿಜೆಪಿಯಿಂದ ಬಲಿಷ್ಠ ಅಭ್ಯರ್ಥಿ ಕಣಕ್ಕಿಳಿಯದ ಕಾರಣ ಅರ್ಧಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಲು ನೆರವಾಗಿದೆ. ಕೃಷ್ಣರಾಜ ಕ್ಷೇತ್ರದಲ್ಲಿ ಬಿಜೆಪಿಯ ಎಸ್.ಎ.ರಾಮದಾಸ್ 78,573 ಮತಗಳಿಂದ, ಚಾಮರಾಜ ಕ್ಷೇತ್ರದಲ್ಲಿ ಜೆಡಿಎಸ್‌ನ ಎಲ್.ನಾಗೇಂದ್ರ, 51,683 ಮತದಿಂದ, ನರಸಿಂಹರಾಜ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ತನ್ವೀರ್‌ಸೇಠ್ 62268 ಮತಗಳಿಂದ, ತಿ.ನರಸೀಪುರ ಕ್ಷೇತ್ರದಲ್ಲಿ ಜೆಡಿಎಸ್‌ನ ಎಂ.ಅಶ್ವಿನ್‌ಕುಮಾರ್ 92,929 ಮತಗಳಿಂದ, ನಂಜನಗೂಡು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಹರ್ಷವರ್ಧನ್ 78030 ಮತಗಳಿಂದ, ಎಚ್.ಡಿ.ಕೋಟೆಯ ಕಾಂಗ್ರೆಸ್‌ನ ಸಿ.ಅನಿಲ್‌ಕುಮಾರ್ 76,652 ಮತಗಳಿಂದ, ಪಿರಿಯಾಪಟ್ಟಣದ ಬಿಜೆಪಿ ಅಭ್ಯರ್ಥಿ ಕೆ.ಮಹದೇವ್ 77,317 ಮತಗಳಿಂದ. ಕೆ.ಆರ್.ನಗರದ ಹಾಲಿ ಶಾಸಕ ಜೆಡಿಎಸ್‌ನ 79,043 ಮತಗಳಿಂದ, ಹುಣಸೂರಿನ ಜೆಡಿಎಸ್ ಅಭ್ಯರ್ಥಿ ಅಡಗೂರು ಎಚ್.ವಿಶ್ವನಾಥ್ 91,667ಮತಗಳೊಂದಿಗೆ ಗೆಲುವು ಸಾಧಿಸಿದ್ದಾರೆ.

## ಚಾಮರಾಜ ನಗರ



| ಕಾಂಗ್ರೆಸ್ | ಬಿಜೆಪಿ | ಇತರೆ |
|---|---|---|
| 05 | 01 | 01 |

### ಕಾಂಗ್ರೆಸ್ ಭದ್ರಕೋಟೆ ಛಿದ್ರ

**ಚಾಮರಾಜನಗರ:** ನಾಲ್ಕು ವಿಧಾನ ಸಭಾ ಕ್ಷೇತ್ರಗಳಲ್ಲಿ ಎರಡು ಕಾಂಗ್ರೆಸ್ ಮತ್ತು ಒಂದು ಬಿಜೆಪಿ ಮತ್ತು ಬಿಎಸ್‌ಪಿ ಅಭ್ಯರ್ಥಿಗಳು ಆಯ್ಕೆಯಾಗಿದ್ದು,ಕಾಂಗ್ರೆಸ್ ಭದ್ರಕೋಟೆ ಛಿದ್ರಗೊಂಡಿದೆ.ಚಾಮರಾಜನಗರ ವಿಧಾನ ಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಪುಟ್ಟರಂಗಶೆಟ್ಟಿ 75,963 ಮತಗಳನ್ನು ಪಡೆಯುವ ಮೂಲಕ 4,913 ಮತಗಳ ಅಂತರದಲ್ಲಿ ಜಯಗಳಿಸಿದ್ದಾರೆ. ಪ್ರತಿಸ್ಪರ್ಧಿ ಬಿಜೆಪಿ ಅಭ್ಯರ್ಥಿ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ 71,050 ಮತಗಳನ್ನು ಪಡೆದು ಸೋತಿದ್ದಾರೆ. ಮಾಜಿ ಶಾಸಕ ಹಾಗೂ ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ 5,877 ಮತಗಳನ್ನು ಪಡೆದು ಠೇವಣಿ ಕಳೆದುಕೊಂಡಿದ್ದಾರೆ. ಗುಂಡ್ಲುಪೇಟೆ ಕ್ಷೇತ್ರದ ಹಾಲಿ ಸಚಿವೆ ಗೀತಾಮಹದೇವಪ್ರಸಾದ್ 77,467 ಮತಗಳನ್ನು ಪಡೆದು 16,684 ಮತಗಳ ಅಂತರದಲ್ಲಿ ಸೋತಿದ್ದಾರೆ. ಬಿಜೆಪಿ ಅಭ್ಯರ್ಥಿ ಸಿ.ಎಸ್.ನಿರಂಜನ್ ಕುಮಾರ್ 94,151 ಮತಗಳನ್ನು ಪಡೆದು ಗೆದ್ದಿದ್ದಾರೆ. ಬಿಎಸ್‌ಪಿ ರಾಜ್ಯಾಧ್ಯಕ್ಷ ಎನ್ ,ಮಹೇಶ್ 71792 ಮತಗಳನ್ನು ಪಡೆದು 19, 454 ಮತಗಳ ಅಂತರದಲ್ಲಿ ಜಯಗಳಿಸಿದರೆ, ಮಾಜಿ ಶಾಸಕರಾದ ಕಾಂಗ್ರೆಸ್ ಅಭ್ಯರ್ಥಿ ಎ.ಆರ್. ಕೃಷ್ಣಮೂರ್ತಿ 52,338 ಮತಗಳು, ಬಿಜೆಪಿ ಅಭ್ಯರ್ಥಿ ಜಿ.ಎನ್ .ನಂಜುಂಡಸ್ವಾಮಿ 39690 ಮತಗಳನ್ನು ಪಡೆಯುವ ಮೂಲಕ ಸೋಲನ್ನು ಅನುಭವಿಸಿದ್ದಾರೆ. ಹನೂರು ಕ್ಷೇತ್ರದಿಂದ ಕಾಂಗ್ರೆಸ್‌ನ ಆರ್.ನರೇಂದ್ರ 60,444 ಮತ ಪಡೆದು 3513 ಮತಗಳ ಅಂತರದಲ್ಲಿ ಜಯಗಳಿಸಿದರೆ, ಪ್ರತಿಸ್ಪಧಿಗಳಾದ ಬಿಜೆಪಿ ಅಭ್ಯರ್ಥಿ ಪ್ರೀತನ್ ನಾಗಪ್ಪ 56931, ಜೆಡಿಎಸ್‌ನ ಮಂಜುನಾಥ್,44957 ಮತಗಳನ್ನು ಪಡೆದು ಪರಾಭವಗೊಂಡಿದ್ದಾರೆ.

# ಕಾಂಗ್ರೆಸ್‌ಗೆ ಪಾಠ ಕಲಿಸಿದ ಕರ್ನಾಟಕ ಮತದಾರ

**ದೆಹಲಿ:** ಕರ್ನಾಟಕ ರಾಜ್ಯವಿಧಾನ ಸಭಾ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ ಬಹುಮತ ಪಡೆಯಲು ಸಾಧ್ಯವಾಗದಿದ್ದರೂ ನಿರೀಕ್ಷೆಗೂ ಮೀರಿ ಅತಿ ಹೆಚ್ಚು ಸ್ಥಾನ ಪಡೆದ ಪಕ್ಷವಾಗಿ ಹೊರಹೊಮ್ಮಿದೆ. ಈ ಫಲಿತಾಂಶ ಕುರಿತು ಪ್ರತಿಕ್ರಿಯೆ ನೀಡಿದ ಪ್ರಧಾನಿ ಮೋದಿ ಹಾಗೂ ಅಮಿತ್ ಶಾ ಕರ್ನಾಟಕದ ಜನತೆಗೆ ಅಭಿನಂದನೆ ಸಲ್ಲಿಸಿದರು. ಜತೆಗೆ ಕರ್ನಾಟಕದ ಪ್ರಗತಿಗೆ ಬದ್ಧವಾಗಿರುವುದಾಗಿಯೂ ಭರವಸೆ ನೀಡಿದರು.

ದೆಹಲಿಯಲ್ಲಿರುವ ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅಮಿತ್ ಶಾ, ಕಾಂಗ್ರೆಸ್ ವಿರುದ್ಧ ಹರಿಹಾಯ್ದರು. 'ದೇಶದ ಇತರೆ ಭಾಗಗಳಂತೆ ಕರ್ನಾಟಕದ ಜನರು ಪ್ರಧಾನಿ ನರೇಂದ್ರ ಮೋದಿ ಅವರ ಪಾರದರ್ಶಕ ಹಾಗೂ ಸ್ವಚ್ಛ ಆಡಳಿತದ ಮೇಲೆ ನಂಬಿಕೆ ಇಟ್ಟಿದ್ದಾರೆ. ಕಾಂಗ್ರೆಸ್ ಈಗಲೂ ತಾವು ಗೆದ್ದಿದ್ದೇನೆ ಎಂದು ಭಾವಿಸುತ್ತಿದೆ. ಮುಖ್ಯಮಂತ್ರಿಗಳು ತಮ್ಮ ಸ್ವಕ್ಷೇತ್ರದಲ್ಲೇ 30 ಸಾವಿರ ಮತಗಳ ಅಂತರದಲ್ಲಿ ಸೋತಿರುವುದು ಅವರ ದುರಾಡಳಿತಕ್ಕೆ ಸಾಕ್ಷಿ. ಲಿಂಗಾಯತರಿಗೆ ಸ್ಥಾನಮಾನದ ಆಸೆ ತೋರಿ ಧರ್ಮವನ್ನು ಒಡೆದಿದ್ದರು. ಕರ್ನಾಟಕದಲ್ಲಿ ಪಿಎಫ್‌ಐ ನಂತಹ ಸಂಘಟನೆಗಳಿಗೆ ಬೆಂಬಲ ನೀಡುತ್ತಿದ್ದರು. ಇವೆಲ್ಲದಕ್ಕೂ ಜನತೆ ತಕ್ಕ ಉತ್ತರ ನೀಡಿದ್ದಾರೆ' ಎಂದರು. 'ಕಾಂಗ್ರೆಸ್ ಸರಕಾರ ಚುನಾವಣೆಯಲ್ಲಿ ಹಣ ಬಲ, ಜನಬಲವನ್ನು ಅತಿಯಾಗಿ ಬಳಸಿತ್ತು. ನಕಲಿ ಮತದಾರರ ಗುರುತಿನ ಚೀಟಿ ಮೂಲಕ ಅಕ್ರಮಕ್ಕೆ ಮುಂದಾಗಿತ್ತು. ಆದರೂ ಅವರ ತಂತ್ರಗಳು ಫಲ ನೀಡಲಿಲ್ಲ. ಬಿಜೆಪಿಯ





ಅಭಿವೃದ್ಧಿ ಕಾರ್ಯಕ್ರಮಗಳಿಗೆ ಜಯ ಸಿಕ್ಕಿದೆ. ಕರ್ನಾಟಕದ ಜನತೆ ರಾಜ್ಯದಲ್ಲಿ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮುವಂತೆ ಆಶೀರ್ವಾದ ಮಾಡಿದ್ದಾರೆ. ಪ್ರಧಾನಿ ಮೋದಿ ಅವರೇ ರಾಜ್ಯಾದ್ಯಂತ ಪ್ರವಾಸ ಮಾಡಿ, ಸಾಮಾನ್ಯ ಕಾರ್ಯಕರ್ತನಂತೆ ಪಕ್ಷಕ್ಕಾಗಿ ದುಡಿದಿದ್ದಾರೆ. ನಾಯಕರ ಜತೆಗೆ ಕಾರ್ಯಕರ್ತರ ನಿರಂತರ ಪರಿಶ್ರಮಕ್ಕೆ ಈ ಯಶಸ್ಸು ಸಿಕ್ಕಿದೆ. ಹೀಗಾಗಿ ಪಕ್ಷದ ಎಲ್ಲ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸುತ್ತೇನೆ' ಎಂದರು.

ಇನ್ನು 2019ರ ಲೋಕಸಭಾ ಚುನಾವಣೆ ಕುರಿತು ಮಾತನಾಡಿದ ಶಾ, '2019ರ ಲೋಕಸಭಾ ಚುನಾವಣೆಯಲ್ಲೂ ಮೋದಿ ಅವರ ನೇತೃತ್ವದಲ್ಲಿ ಎನ್‌ಡಿಎ ಬಹುಮತ ಪಡೆದು ಅಧಿಕಾರದ ಹಿಡಿಯಲಿದೆ. 2019ರಿಂದ ನವ ಭಾರತದ ನಿರ್ಮಾಣದ ಕಾರ್ಯ ಆರಂಭವಾಗಲಿದೆ' ಎಂದರು.

**ಕನ್ನಡಿಗರ ಪ್ರೀತಿಗೆ ತಲೆಬಾಗಿದ ಮೋದಿ:** ಕರ್ನಾಟಕದಲ್ಲಿ ಪಕ್ಷದ ಯಶಸ್ಸಿನ ಕುರಿತು ಮಾತನಾಡಿದ ಪ್ರಧಾನಿ ಕನ್ನಡಿಗರು ತೋರಿದ ಪ್ರೀತಿಗೆ ತಲೆ ಬಾಗುತ್ತೇನೆ ಎಂದು ಅಭಿನಂದನೆ ಸಲ್ಲಿಸಿದರು. 'ಚುನಾವಣೆ ಸಂದರ್ಭದಲ್ಲಿ ಬಿಜೆಪಿಯನ್ನು ಹಿಂದಿ ಭಾಷಿಗರ ಪಕ್ಷ ಎಂದು ಬಿಂಬಿಸಲಾಗಿತ್ತು. ಗುಜರಾತ್, ಮಹಾರಾಷ್ಟ್ರ, ಗೋವಾ, ಅಸ್ಸಾಂ, ಈಶಾನ್ಯ ರಾಜ್ಯಗಳು ಹಿಂದಿ ಭಾಷಿಗರ ರಾಜ್ಯಗಳೇ? ಅಲ್ಲಿನ ಜನರು ನಮ್ಮನ್ನು ಸ್ವೀಕರಿಸಿಲ್ಲವೇ? ಚುನಾವಣೆ ಗೆಲ್ಲಲು ತಮ್ಮನ್ನು ಹೊರಗಿನವರು ಎಂದು ಅಪಪ್ರಚಾರ ಮಾಡಲಾಗಿತ್ತು. ಆದರೆ ಕರ್ನಾಟಕದ ಜನರು ಭಾಷೆಯ ಅಂತರವನ್ನು ಮರೆತು ನನಗೆ ಪ್ರೀತಿ ತೋರಿದರು.

ಅವರ ಪ್ರೀತಿಗೆ ನಾನು ಸಾದಾ ಋಣಿಯಾಗಿರುತ್ತೇನೆ. ಚುನಾವಣೆಗಾಗಿ ಭಾರತದ ಒಕ್ಕೂಟ ವ್ಯವಸ್ಥೆ, ಭಾವನೆಗಳನ್ನು ಒಡೆಯುವ ಪ್ರಯತ್ನ ಮಾಡಲಾಗುತ್ತಿದೆ. ಕೇಂದ್ರ ಮತ್ತು ರಾಜ್ಯಗಳ ನಡುವೆ, ಉತ್ತರ– ದಕ್ಷಿಣ ಎಂಬ ತಾರತಮ್ಯ ಭಾವನೆ ಮೂಡಿಸಿ ಒಡೆಯುವ ಪ್ರಯತ್ನ ನಡೆಸಲಾಗುತ್ತಿದೆ. ಇದು ಅವರ ಹೀನ ಮನಸ್ಥಿತಿಗೆ ಸಾಕ್ಷಿ. ಇದಕ್ಕೆ ಕರ್ನಾಟಕದ ಜನತೆ ತಕ್ಕ ಉತ್ತರ ನೀಡಿದ್ದಾರೆ. ಕರ್ನಾಟಕದಲ್ಲಿ ಕಾರ್ಯಕರ್ತರ ಪರಿಶ್ರಮ ಅತ್ಯುತ್ತಮವಾಗಿತ್ತು. ಸಂಘಟನೆ ಶಕ್ತಿಯಿಂದಲೇ ನಮಗೆ ಈ ಜಯ ಸಾಧ್ಯವಾಗಿದೆ.

ಕರ್ನಾಟಕದ ಉಜ್ವಲ ಭವಿಷ್ಯಕ್ಕೆ ನಾವು ಬದ್ಧರಾಗಿರುತ್ತೇವೆ. ಕನ್ನಡಿಗರ ಏಳಿಗೆಗೆ ಹೆಗಲು ಕೊಟ್ಟು ನಡೆಯುತ್ತೇವೆ ಎಂದು ಈ ಸಂದರ್ಭದಲ್ಲಿ ಭರವಸೆ ನೀಡುತ್ತೇನೆ' ಎಂದು ಮೋದಿ ತಿಳಿಸಿದರು. ಇನ್ನು ಉತ್ತರ ಪ್ರದೇಶದಲ್ಲಿ ಅಪಘಾತಕ್ಕೆ ಸಂತಾಪ ಸೂಚಿಸಿದ ಮೋದಿ, ಪಶ್ಚಿಮ ಬಂಗಾಳದ ಜಿಲ್ಲಾ ಪಂಚಾಯತ್ ಚುನಾವಣೆ ವೇಳೆ ನಡೆದ ಹಿಂಸಾಚಾರವನ್ನು ಖಂಡಿಸಿದರು.

# ಬಿಜೆಪಿ ಈಗಿನ ಫಲಿತಾಂಶಕ್ಕೆ 5 ಕಾರಣಗಳು

**ಬೆಂಗಳೂರು:** ಕಳೆದ ನಾಲ್ಕೈದು ತಿಂಗಳಿನಿಂದ ರಂಗೇರಿದ್ದ ಕರ್ನಾಟಕ ಚುನಾವಣೆ ಬಹುತೇಕ ಅಂತ್ಯಗೊಂಡಿದ್ದು, ಇಡಯಿಅಡಯೆ ವಿಧಾನಸಭೆ ಸೃಷ್ಟಿಯಾಗಿದೆ. ಆದರೆ ಸರಕಾರ ಯಾರು ರಚನೆ ಮಾಡುತ್ತಾರೆ ಎಂಬುದು ಇನ್ನೂ ನಿಗೂಢವಾಗಿ ಉಳಿದಿದೆ. ಆದರೆ ಫಲಿತಾಂಶ ಈ ರೀತಿ ಅತಂತ್ರವಾಗಿ ಬರಲು ಹಲವು ಕಾರಣಗಳಿದ್ದು, ಅವುಗಳಲ್ಲಿ ಪ್ರಮುಖ ಕಾರಣಗಳನ್ನು ಹೀಗೆ ಪಟ್ಟಿ

- **ಮೋದಿ ಮ್ಯಾಜಿಕ್**

ಈ ಚುನಾವಣೆಯನ್ನು ಕಾಂಗ್ರೆಸ್ ಕಳೆದುಕೊಳ್ಳಲು ಪ್ರಮುಖ ಕಾರಣ ಮೋದಿ ಮ್ಯಾಜಿಕ್ ತಡೆಯಲು ಕಾಂಗ್ರೆಸ್ ವಿಫಲವಾಗಿರುವುದು. ಚುನಾವಣಾ ಪೂರ್ವ ಸಮೀಕ್ಷೆಗಳೆಲ್ಲವೂ ಕಾಂಗ್ರೆಸ್ ಗೆಲುವು ಸಾಧಿಸಲಿದೆ ಎಂದು ಅಭಿಪ್ರಾಯ ಪಟ್ಟಿತ್ತು. ಬಳಿಕ ನರೇಂದ್ರ ಮೋದಿ ರಾಜ್ಯದಲ್ಲಿ ಅಬ್ಬರದ ಪ್ರಚಾರ ನಡೆಸಿದ್ದರು. ಆದರೆ ಮೋದಿಗೆ ಸಮರ್ಥವಾಗಿ ತಿರುಗೇಟು ನೀಡಲು ಕಾಂಗ್ರೆಸ್ ವಿಫಲವಾಯಿತು.

- **ರಾಹುಲ್ ಪ್ರಚಾರ**

ರಾಹುಲ್ ಗಾಂಧಿ ಎಐಸಿಸಿ ಅಧ್ಯಕ್ಷರಾದ ಬಳಿಕ ನಡೆದ ಮೊದಲ ಚುನಾವಣೆ ಗೆಲ್ಲಲೇ ಬೇಕಾದ ಒತ್ತಡ ಇತ್ತು. ಅದಕ್ಕಾಗಿ ಹಲವಾರು ಮತ ಮಂದಿರಗಳಿಗೆ ಭೇಟಿ ನೀಡಿ ಸಾಫ್ಟ್ ಹಿಂದುತ್ವ ಕಾರ್ಡ್ ಪ್ಲೇ ಮಾಡಿದ್ದರು. ಅಲ್ಲದೇ ಮೋದಿಯವರ ಟೀಕೆಗಳಿಗೆ ರಾಹುಲ್ ಸಮರ್ಥ ಉತ್ತರ ನೀಡಲು ವಿಫಲರಾಗಿದ್ದರು. ರಾಹುಲ್ ತಮ್ಮ ಚರಿಷ್ಮಾ ಇನ್ನೂ ಉತ್ತಮಗೊಳಿಸಲು ಪ್ರಯತ್ನಸಬೇಕಿತ್ತು.

- **ಕಾಂಗ್ರೆಸ್‌ಗೆ ಹಣದ ಕೊರತೆ**

ದೇಶದ ಹಲವಾರು ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಂಡಿರುವ ಕಾಂಗ್ರೆಸ್ ನ ಆದಾಯದಲ್ಲೂ ಕುಸಿತವಾಗಿರುವುದು ಸುಳ್ಳಲ್ಲ. ಬಿಜೆಪಿ ಪ್ರಚಾರ ಹಾಗೂ ಜಾಹಿರಾತಿಗೆ ವ್ಯಯಿಸಿದಷ್ಟು ಕಾಂಗ್ರೆಸ್ ವ್ಯಯಿಸಿಲ್ಲ. ಅಲ್ಲದೇ ಈ ಸೋಲು ಕಾಂಗ್ರೆಸ್ ಆದಾಯದಲ್ಲೂ ಇನ್ನೂ ಕುಸಿತವಾಗುವ ಸಂಭವವಿದೆ.

- **ಪ್ರಾದೇಶಿಕ ಸಮಸ್ಯೆಗಳ ಬಗ್ಗೆ ಗಮನ ಹರಿಸದೇ ಇದ್ದುದ್ದು**

ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿಯ ನಾಯಕರು ಕೇಂದ್ರ ಸರಕಾರದ ಬಗ್ಗೆ ಹೇಳುತ್ತಾ ಭರ್ಜರಿ ಪ್ರಚಾರ ಮಾಡಿದ್ದರು. ಆದರೆ ಕಾಂಗ್ರೆಸ್ ಸರಕಾರ ಪ್ರಾದೇಶಿಕ ಸಮಸ್ಯೆ ಹಾಗೂ ತನ್ನ ಸಾಧನೆಗಳನ್ನು ಜನರಿಗೆ ತಲುಪಿಸುವಲ್ಲಿ ವಿಫಲವಾಯಿತು. ಜತೆಗೆ ಲಿಂಗಾಯಿತ ಫ್ಯಾಕ್ಟರ್ ಕಾಂಗ್ರೆಸ್‌ಗೆ ಕೈ ಹೊಟ್ಟಿದ್ದು ದೊಡ್ಡ ಹೊಡೆತ ಅಲ್ಲದೇ ಕಾವೇರಿ ಹಾಗೂ ಮಹಾದಾಯಿ ಸಮಸ್ಯೆ ಬಗೆ ಹರಿಸುವಲ್ಲಿ ಕಾಂಗ್ರೆಸ್‌ಗೆ ಸ್ಪಷ್ಟ ನಿಲುವು ತಾಳದ್ದು ದುಬಾರಿಯಾಯಿತು.

- **ಜೆಡಿಎಸ್ ಪ್ರಾಬಲ್ಯ**

ಹಳೆ ಮೈಸೂರು ವಿಭಾಗದಲ್ಲಿ ಜೆಡಿಎಸ್ ಪ್ರಾಬಲ್ಯ ಹೊಂದಿದ್ದು, ಮಂಡ್ಯ ಜಿಲ್ಲೆಯಲ್ಲಿ ಕ್ಲೀನ್ ಮಾಡಿದೆ. ಜತೆಗೆ ರಾಹುಲ್ ಗಾಂಧಿ ಜೆಡಿಎಸ್ ಅನ್ನು ಬಿಜೆಪಿಯ ಬಿ.ಟೀಂ ಎಂದು ಜರೆದಿದ್ದು ಕಾಂಗ್ರೆಸ್ ಹಿನ್ನಡೆಗೆ ಕಾರಣವಾಯಿತು. ಒಂದು ವೇಳೆ ಕಾಂಗ್ರೆಸ್ ಹಾಗೂ ಜೆಡಿಎಸ್ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡಿದ್ದರೆ, ಫಲಿತಾಂಶದಲ್ಲಿ ಭಾರಿ ಪೇರಾಗುವ ಸಾಧ್ಯತೆ ಇತ್ತು.

# 'ಕೈ' ಹಿಡಿಯದ ಜಾತಿ ಲೆಕ್ಕಾಚಾರ

**ರಂಜಿತ್ ಎಚ್.ಅಶ್ವತ್ಥ** ಬೆಂಗಳೂರು

ಜಾತಿ ಲೆಕ್ಕಾಚಾರವನ್ನು ಇಟ್ಟುಕೊಂಡು ಚುನಾವಣೆಯಲ್ಲಿ ಹೆಚ್ಚು ಸೀಟು ಗೆಲ್ಲಬಹುದು ಎನ್ನುವ ಹುಮ್ಮಸ್ಸಿನಲ್ಲಿ ಕಾಂಗ್ರೆಸ್ ಕೈ ಹಾಕಿದ ಮೂರು ಅಂಶಗಳಿಂದಲೇ ಕಾಂಗ್ರೆಸ್ ಎರಡಂಕಿಗೆ ಕುಸಿಯಲು ಕಾರಣವಾಗಿದೆ.

ಸಿದ್ದರಾಮಯ್ಯ ಅವರ ಸರಕಾರ ಅಧಿಕಾರಕ್ಕೆ ಬಂದ ಕೂಡಲೇ, ಸದಾಶಿವ ಆಯೋಗ ರಚಿಸಿ ಒಳ ಮೀಸಲು ನೀಡುವ ಬಗ್ಗೆ ಘೋಷಿಸಿದ್ದು, ಒಂದೆಡೆಯಾದರೆ ಚುನಾವಣಾ ವರ್ಷದ ವೇಳೆ ವೀರಶೈವ ಲಿಂಗಾಯತಕ್ಕೆ ಪ್ರತ್ಯೇಕ ಧರ್ಮದ ಸ್ಥಾನಮಾನ ನೀಡುವುದಕ್ಕೆ ಸಿದ್ದರಾಮಯ್ಯ ಮುಂದಾಗಿದ್ದು, ಚುನಾವಣಾ ಹಿನ್ನಡೆಗೆ ಮತ್ತೊಂದು ಕಾರಣ. ಈ ಎರಡೂ ಅಂಶಗಳೊಂದಿಗೆ ಜಾತಿವಾರು ಸಮೀಕ್ಷೆ ಮೂಲಕ ಮತಬೇಟೆಗೆ ಮುಂದಾಗಿದ್ದು, ಕೊನೆ ಕ್ಷಣದಲ್ಲಿ ಕಾಂಗ್ರೆಸ್‌ಗೆ ಹೊಡೆತ ಬಿದ್ದಿದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಈ ಮೂರು ಅಂಶಗಳನ್ನು ಜಾರಿಗೊಳಿಸಬೇಕೆ, ಬೇಡವೇ ಎನ್ನುವ ವಿಚಾರದ ಬಗ್ಗೆ ಸ್ವತಃ ಕಾಂಗ್ರೆಸ್ ನಾಯಕರಲ್ಲಿಯೇ ಹಗ್ಗಜಗ್ಗಾಟ ಏರ್ಪಟ್ಟಿತ್ತು. ಈ ವಿಚಾರವಾಗಿ ಸಿದ್ದರಾಮಯ್ಯ ಅನೇಕ ಬಾರಿ ನಾಯಕರನ್ನು ಒಮ್ಮತ್ತಕ್ಕೆ ತರಲು ಪ್ರಯತ್ನಿಸಿದರೂ, ಇದು ಸಾಧ್ಯವಾಗಲಿಲ್ಲ. ಸದಾಶಿವ ವರದಿ ಜಾರಿ ಹಾಗೂ ಲಿಂಗಾಯತ ಧರ್ಮದ ವಿಚಾರದಲ್ಲಿ ಸಚಿವ ಸಂಪುಟ ಸಭೆಯಲ್ಲಿ ಸಚಿವರ ನಡುವೆ ವಾಕ್ಸಮರ ನಡೆದಿತ್ತು. ಆದ್ದರಿಂದ ಚುನಾವಣಾ ಘೋಷಣೆಯಾದ ಬಳಿಕ ಒಗ್ಗಟ್ಟಿನ ಮಂತ್ರ ನಾಯಕರು ಪಠಿಸಿದರೂ, ನಿಜವಾದ ಅರ್ಥದಲ್ಲಿ ಇದು ಸಾಧ್ಯವಾಗಿರಲಿಲ್ಲ. ಇದು ಸೋಲಿಗೆ ಪ್ರಮುಖ ಕಾರಣ. ಲಿಂಗಾಯತ ಪ್ರತ್ಯೇಕ ಧರ್ಮದ ಸ್ಥಾನಮಾನ ನೀಡಬೇಕೆಂದು



### ತಲೆಕೆಳಗಾದ ಜಾತಿ ಸಮೀಕ್ಷೆ

**ಸಿದ್ದರಾಮಯ್ಯ ಅವರು ಒಳಜಾತಿ ಲೆಕ್ಕಚಾರದಲ್ಲಿ ಗೆಲುವು ಸಾಧಿಸಬಹುದೆಂದು, ಆರಂಭಿಸಿದ್ದ ಜಾತಿ ಸಮೀಕ್ಷೆ ಅಂತಿಮವಾಗಿ ಕಾಂಗ್ರೆಸ್‌ಗೆ ಮುಳುವಾಗಿದೆ. ಒಳಜಾತಿಗಳ ಸಮೀಕರಣದಿಂದ, ಅನೇಕ ಕ್ಷೇತ್ರಗಳಲ್ಲಿ ಒಳಜಾತಿ ಮತಗಳು ಒಂದಾಗಿ ಕಾಂಗ್ರೆಸ್‌ನಿಂದ ಮತಗಳು ವಿಭಜನೆಯಾಗಿವೆ. ಪ್ರಮುಖವಾಗಿ ಈ ಸಮೀಕ್ಷೆಯನ್ನು ಆರಂಭಿಸಿದ್ದರಿಂದ, ಅಹಿಂದ ಮತಗಳು ಕಾಂಗ್ರೆಸ್‌ನಿಂದ ಕೈತಪ್ಪಲಿವೆ ಎನ್ನುವ ಮಾತುಗಳು ಚುನಾವಣೆಗೆ ಮೊದಲೇ, ಕೇಳಿಬಂದಿತ್ತು. ಫಲಿತಾಂಶದಲ್ಲಿ ಈ ಮಾತುಗಳು ನಿಜವಾಗಿರುವುದು ಸಾಬೀತಾಗುತ್ತಿದೆ.**

ಜಲಸಂಪನ್ಮೂಲ ಸಚಿವ ಎಂ.ಬಿ ಪಾಟೀಲ್, ವಿನಯ್ ಕುಲಕರ್ಣಿ ಪಟ್ಟುಹಿಡಿದರೆ, ಇದಕ್ಕೆ ಕಾಂಗ್ರೆಸ್‌ನ ಹಿರಿಯ ಮುತ್ಸದಿ ಶಾಮನೂರು ಶಿವಶಂಕರಪ್ಪ ಭಾರೀ ವಿರೋಧ ವ್ಯಕ್ತಪಡಿಸಿದ್ದರು. ಒಂದು ಹಂತದಲ್ಲಿ ತಮ್ಮ ಪುತ್ರ ಎಸ್.ಎಸ್ ಮಲ್ಲಿಕಾರ್ಜುನ ಅವರಿಗೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಸೂಚಿಸಿದರು. ಆದ್ದರಿಂದ ಮಧ್ಯ ಹಾಗೂ ಉತ್ತರ ಕರ್ನಾಟಕ ಕಾಂಗ್ರೆಸ್ ನಾಯಕರ ಮನಸ್ತಾಪಕ್ಕೂ ಕಾರಣವಾಗಿ ಒಮ್ಮತದ ನಿರ್ಧಾರ ಪಡೆದು ಚುನಾವಣೆ ಎದುರಿಸುವಲ್ಲಿ ಹಿನ್ನಡೆಯಾಗಿದೆ.

ವೀರಶೈವ ಲಿಂಗಾಯತಕ್ಕೆ ಪ್ರತ್ಯೇಕ ಸ್ಥಾನಮಾನ ನೀಡಬೇಕೆಂದು ಪಕ್ಷದ ನಾಯಕರೇ ಆಗ್ರಹಿಸಿದರೂ, ಲಿಂಗಾಯತಕ್ಕೆ ಪ್ರತ್ಯೇಕ ಸ್ಥಾನಮಾನಕ್ಕಾಗಿ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿದ್ದರಿಂದ, ಪಕ್ಷದಲ್ಲಿಯೇ ಒಡಕು ಮೂಡಿತ್ತು. ಆದರೆ, ಈ ವಿಚಾರದಲ್ಲಿ ಬಿಜೆಪಿ ಮಾತ್ರ ತಟಸ್ಥ ನೀತಿ ಅನುಸರಿಸಿತ್ತು. ಆದ್ದರಿಂದ ಮಧ್ಯ ಕರ್ನಾಟಕ, ಉತ್ತರ ಕರ್ನಾಟಕ ಹಾಗೂ ಹೈದರಬಾದ್ ಕರ್ನಾಟಕ ಭಾಗದಲ್ಲಿ ಬಿಜೆಪಿ ಮೇಲುಗೈ ಸಾಧಿಸಿತ್ತು.

ಒಳ ಮೀಸಲು ಜಗಳ ತಣಿಸುವಲ್ಲಿ ವಿಫಲ ಇನ್ನು ಸಮಾಜ ಕಲ್ಯಾಣ ಸಚಿವ ಎಚ್.ಆಂಜನೇಯ ಅವರ ಅಪೇಕ್ಷೆಯಂತೆ ದಲಿತರಿಗೆ ಒಳ ಮೀಸಲು ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸದಾಶಿವ ಆಯೋಗದ ವರದಿಯನ್ನು ಕೇಂದ್ರಕ್ಕೆ ಶಿಫಾರಸು ಮಾಡಲು ಮುಂದಾಗಿದ್ದು, ಪಕ್ಷಕ್ಕಿಂದ 'ದಲಿತ ವೋಟ್ ಬ್ಯಾಂಕ್' ವರ್ಚಸ್ಸು ಕಡಿಮೆ ಮಾಡಿತ್ತು. ಇದೇ ವಿಚಾರ ಎಡಗೈ, ಬಲಗೈ ನಾಯಕರ ಮಧ್ಯೆ ತಿಕ್ಕಾಟಕ್ಕೆ ಕಾರಣವಾಗಿ, ಮತ ವಿಭಜನೆಯಾಗಿದೆ. ಈ ತಿಕ್ಕಾಟದ ಫಲ, ಎಸ್ಸಿ, ಎಸ್ಟಿ ಮೀಸಲು ಕ್ಷೇತ್ರದ ಸೋಲಿಗೆ ಪ್ರಮುಖ ಕಾರಣವಾಗಿದೆ. ಸಾಂಪ್ರದಾಯಿಕ ಕಾಂಗ್ರೆಸ್ ಮತಗಳು ಸಂಪೂರ್ಣವಾಗಿ ಬಿಜೆಪಿಯತ್ತ ವಾಲದಿದ್ದರೂ, ಇತರೆ ಸಮುದಾಯಗಳ ಮತಗಳನ್ನು ಒಂದೆಡೆ ಕ್ರೋಢೀಕರಿಸುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಆದ್ದರಿಂದ ಜೆಡಿಎಸ್ ನೆಲೆಯಿಲ್ಲದ ಅನೇಕ ಸ್ಥಳಗಳಲ್ಲಿ, ಬಿಜೆಪಿ ನಂತರದ ಸ್ಥಾನ ಪಡೆಯುವಲ್ಲಿ ಜೆಡಿಎಸ್ ಯಶಸ್ವಿಯಾದರೆ ಕಾಂಗ್ರೆಸ್ ಮೂರನೇ ಸ್ಥಾನಕ್ಕೆ ಕುಸಿದಿದೆ.

# ಸಿನಿಮಾ ಮಂದಿ ಹಾಕಲೇ ಇಲ್ಲ ಮಣೆ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಬಣ್ಣ ಹಚ್ಚಿ ತೆರೆಯ ಮೇಲೆ ಅಬ್ಬರಿಸಿ ಅಭಿಮಾನಿಗಳನ್ನು ರಂಜಿಸುತ್ತಿದ್ದ ಹಲವು ಸಿನಿಮಾ ಮಂದಿ ಈ ಸಲವೂ ರಾಜ್ಯ ವಿಧಾನಸಭಾ ಚುನಾವಣಾ ಕಣದಲಿದ್ದರು. ಅವರಲ್ಲಿ ಕಾಂಗ್ರೆಸ್‌ನಿಂದ ತೆರದಾಳ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಾಜಿ ಸಚಿವೆ ಉಮಾಶ್ರೀ, ಹಿರೇಕೇರೂರಿನಲ್ಲಿ ಬಿ.ಸಿ. ಪಾಟೀಲ್, ಬಿಜೆಪಿಯ ಸಿ.ಪಿ. ಯೋಗೇಶ್ವರ್ (ಚನ್ನಪಟ್ಟಣ), ಜಗ್ಗೇಶ್ (ಯಶವಂತಪುರ), ಕುಮಾರ ಬಂಗಾರಪ್ಪ (ಸೊರಬ), ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮೀ ಲೇಔಟ್, ಬೆಂಗಳೂರು), ಸಾಯಿಕುಮಾರ್ (ಬಾಗೇಪಲ್ಲಿ),







ಜೆಡಿಎಸ್ ಪಕ್ಷದಿಂದ ಶಶಿಕುಮಾರ್ (ಹೊಸದುರ್ಗ), ಸಿ.ಆರ್. ಮನೋಹರ್ (ಬಾಗೇಪಲ್ಲಿ) ಪ್ರಮುಖರು. ಇವರ ಹೊರತಾಗಿ ಹೆಸರೇ ಕೇಳದಿದ್ದ ಹೊಸ ಪಕ್ಷದಿಂದ ನರ್ಸ್ ಜಯಲಕ್ಷ್ಮಿ (ಬಿಟಿಎಂ) ಚುನಾವಣಾ ಕಣದಲ್ಲಿದ್ದು ತಮ್ಮ ಅದೃಷ್ಟ ಪರೀಕ್ಷೆ ನಡೆಸಿದ್ದರು. ಅವರಲ್ಲಿ ಒಂದಿಬ್ಬರನ್ನು ಹೊರತುಪಡಿಸಿದರೆ ಹೆಚ್ಚಿನವರ‍್ಯಾರೂ ಗೆದ್ದು ಜನ ಮನ್ನಣೆ ಪಡೆದಿಲ್ಲ. ಬಣ್ಣದ ಬದುಕಿನಲ್ಲಿ ಯಶಸ್ವಿಯಾಗಿ, ಹೆಸರು ಮಾಡಿ ಬಳಿಕ ಚುನಾವಣೆಗೆ ನಿಂತ ಅಭ್ಯರ್ಥಿಗಳ ಭವಿಷ್ಯ ಕೆಳಗಿನಂತಿದೆ. ಕೌರವನಾಗಿ ಚಿತ್ರರಂಗದಲ್ಲಿ ಮೆರೆದಿದ್ದ ಬಿ.ಸಿ. ಪಾಟೀಲ್ ಹಿರೇಕೇರೂರಿನಲ್ಲಿ ಬಿಜೆಪಿಯ ಯು.ಬಿ. ಬಣಕಾರ್ ವಿರುದ್ಧ ಗೆಲುವಿನ ನಗೆ ಬೀರಿದ್ದಾರೆ. ಚನ್ನಪಟ್ಟಣದಲ್ಲಿ ಕೆಲ ತಿಂಗಳ ಮುಂಚೆ ಕೈಬಿಟ್ಟು ಕೇಸರಿ ಶಾಲು ಹೊದ್ದಿದ್ದ ನಟ ಸಿ.ಪಿ. ಯೋಗೇಶ್ವರ್‌ಗೆ ನಿರ್ಮಾಪಕ, ಮಾಜಿ ಸಿಎಂ, ಜೆಡಿಎಸ್ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಸೋಲಿನ ಹಾರ ತೊಡಿಸಿದ್ದಾರೆ. ಇದೇ ಕ್ಷೇತ್ರದಿಂದ ಮತ್ತೊಬ್ಬ ನಿರ್ಮಾಪಕ ಎಚ್.ಎಂ. ರೇವಣ್ಣ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದರು.

ಕಾಂಗ್ರೆಸ್‌ನ ಎಸ್.ಎನ್. ಸುಬ್ಬಾರೆಡ್ಡಿ ವಿರುದ್ಧ ಜೆಡಿಎಸ್‌ನಿಂದ ನಿರ್ಮಾಪಕ ಸಿ.ಆರ್. ಮನೋಹರ್ ಹಾಗೂ ಬಿಜೆಪಿಯಿಂದ ನಟ ಸಾಯಿಕುಮಾರ್ ಸ್ಪರ್ಧಿಸಿ ಸೋಲನುಭವಿಸಿದ್ದಾರೆ.

ಬಿಜೆಪಿಯ ಸಿದ್ದು ಸವದಿ (73,346 ಮತಗಳು) ವಿರುದ್ಧ ಮಾಜಿ ಸಚಿವೆ ಉಮಾಶ್ರೀ (55,366 ಮತಗಳು) ಸೋಲನುಭವಿಸಿದ್ದಾರೆ. ಸಿದ್ದರಾಮಯ್ಯ ಸರ್ಕಾರದಲ್ಲಿ ಸಚಿವೆಯಾಗಿದ್ದರೂ ತಮ್ಮ ಕ್ಷೇತ್ರವನ್ನು ಉಳಿಸಿಕೊಳ್ಳಲು ವಿಫಲರಾಗಿದ್ದಾರೆ. ಯಶವಂತಪುರ ಕ್ಷೇತ್ರದಿಂದ ಕೊನೆಯ ಕ್ಷಣದಲ್ಲಿ ಬಿಜೆಪಿ ಟಿಕೆಟ್ ಗಿಟ್ಟಿಸಿಕೊಂಡಿದ್ದ ನಟ ಜಗ್ಗೇಶ್ ಕಾಂಗ್ರೆಸ್‌ನ ಹಾಲಿ ಶಾಸಕ ಎಸ್.ಟಿ. ಸೋಮಶೇಖರ್ ಎದುರು ಮುಗ್ಗರಿಸಿದ್ದಾರೆ. ಸೋದರರ ಸವಾಲ್‌ಗೆ ಹೆಸರಾಗಿರುವ ಸೊರಬದಲ್ಲಿ ಕಳೆದ ಬಾರಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ, ತಮ್ಮನೆದುರು ಸೋತಿದ್ದ ನಟ ಕುಮಾರ್ ಬಂಗಾರಪ್ಪ ಈ ಬಾರಿ ಬಿಜೆಪಿಯಿಂದ ಕಣಕ್ಕಿಳಿದು ತೆನೆ ಹೊತ್ತಿದ್ದ ಸೋದರ ಮಧು ಬಂಗಾರಪ್ಪರನ್ನು ಮಣಿಸಿದ್ದಾರೆ. ಹೊಸದುರ್ಗ ಕ್ಷೇತ್ರದಿಂದ ಬಿಜೆಪಿಯ ಟಿಕೆಟ್ ತಪ್ಪಿದ್ದಕ್ಕಾಗಿ ಕೊನೆಯ ಗಳಿಗೆಯಲ್ಲಿ ಜೆಡಿಎಸ್ ಸೇರಿ ಚುನಾವಣೆಗೆ ನಿಂತಿದ್ದ ನಟ ಶಶಿಕುಮಾರ್ (736 ಮತಗಳು) ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದ್ದಾರೆ. ಕೈ ಬಿಟ್ಟು ಕಮಲ ಹಿಡಿದಿದ್ದ ನಟ ಕಂ ರಾಜಕಾರಣಿ ನೇಲ ನರೇಂದ್ರಬಾಬು ಮಹಾಲಕ್ಷ್ಮೀ ಲೇಔಟ್‌ನಲ್ಲಿ ಜೆಡಿಎಸ್‌ನ ಹಾಲಿ ಶಾಸಕ ಗೋಪಾಲಯ್ಯ ಎದುರು ಸೋತುಸುಣ್ಣವಾಗಿದ್ದಾರೆ.